# ಕರ್ನಾಟಕ ಸರ್ಕಾರದ

## ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ಬೆಂಗಳೂರು-1



# ಶಿಕ್ಷಣ ಇಲಾಖೆಯಲ್ಲಿನ ಯೋಜನಾ ಕಾರ್ಯಕ್ರಮಗಳ ಪ್ರಗತಿಯ ಪಕ್ಷಿನೋಟ

2008-09 ರಿಂದ 2010-11ರವರೆಗೆ

## ಪ್ರಾಥಮಿಕ ಶಿಕ್ಷಣದ  ಉದ್ದೇಶ ಮತ್ತು ಗುರಿಗಳು

- 6–14 ವಯೋಮಾನದ ರಾಜ್ಯದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡುವ ಗುರಿ ಹೊಂದಿದೆ.
- ಪ್ರಾಥಮಿಕ ಶಿಕ್ಷಣದ ಜನಾಂದೋಲನವಾಗುವಂತೆ ಸಮುದಾಯವನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು.
- ಪ್ರತಿ ಮಗುವು ನಿಗಧಿಪಡಿಸಿದ ಕನಿಷ್ಠ ಕಲಿಕಾ ಮಟ್ಟವನ್ನು ಸಮರ್ಪಕವಾಗಿ ಹೊಂದುವುದು.
- ಗುಣಾತ್ಮಕ ಬದಲಾವಣೆಗಳನ್ನು ತರುವುದರ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ಸುಧಾರಣೆಯನ್ನು ತರುವುದು.
- ಲಿಂಗತಾರತಮ್ಯ ಮತ್ತು ಸಾಮಾಜಿಕ ಅಸಮತೋಲನವನ್ನು ನಿವಾರಿಸುವ ನಿಟ್ಟಿನಲ್ಲಿ ಸಾಧನೆ ಹೊಂದುವುದು.

## ಪ್ರೌಢಶಿಕ್ಷಣದ ಉದ್ದೇಶ:

- ಪ್ರೌಢ ಶಿಕ್ಷಣದಲ್ಲಿ ಗುಣಾತ್ಮಕ ಶಿಕ್ಷಣವನ್ನು ನೀಡಿ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದತ್ತ ಅರ್ಹತೆ ಹೊಂದುವಂತೆ ಮಾಡುವುದು.
- ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಕಲ್ಪಿಸಿ ವೃತ್ತಿ ಪರತೆ ಮತ್ತು ತಾಂತ್ರಿಕ ಶಿಕ್ಷಣವನ್ನು ಪಡೆಯಲು ಸಿದ್ಧಗೊಳಿಸುವುದು.

## ಸಾಧನೆಗಳು:

- ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಉತ್ತಮಗೊಂಡಿದೆ.
- ಮಕ್ಕಳು ತರಗತಿ ಒಳಗೆ ಮತ್ತು ಹೊರಗೆ ಲವಲವಿಕೆಯಿಂದ ಎಲ್ಲಾ ಶೈಕ್ಷಣಿಕ ಚಟುವಟಿಕೆಯಲ್ಲಿ ಭಾಗವಹಿಸುತ್ತಿರುವರು.
- ಶಾಲಾ ಹಂತದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮಾನತೆ ಹೊಂದಲು ಗಣನೀಯ ಸಾಧನೆ ಹೊಂದಿದೆ.
- ವಿವಿಧ  ಪ್ರೋತ್ಸಾಹದಾಯಕ ಯೋಜನೆಯಿಂದ ಮಕ್ಕಳಲ್ಲಿ ಪರಸ್ಪರ ಸೌಹಾರ್ದತೆ ಹಾಗೂ ನಿರೀಕ್ಷಿತ ಗುಣಮಟ್ಟ ಹೆಚ್ಚಾಗಿದೆ.
- ಸುವರ್ಣ ಆರೋಗ್ಯ ಯೋಜನೆಯಡಿಯಲ್ಲಿ 91.76 ಲಕ್ಷ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಕೈಗೊಂಡಿದ್ದು ತೀವ್ರ ಸ್ವರೂಪ ಕಾಯಿಲೆವುಳ್ಳ ಮಕ್ಕಳನ್ನು ಉನ್ನತ ಚಿಕಿತ್ಸೆಗೆ ಒಳಪಡಿಸಿದೆ. ಶಾಲಾ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದೆ.

- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ  ಮೂಲಭೂತ ಸೌಲಭ್ಯಗಳಾದ ಅಗತ್ಯ ಶಾಲಾ ಕಟ್ಟಡ  ಭೋಧನ ಕೊಠಡಿಗಳು,ಪೀಠೋಪಕರಣ, ಶೌಚಾಲಯ, ಮತ್ತು ಕುಡಿಯುವ ನೀರು ಒದಗಿಸಲಾಗಿದೆ.
- ಶಿಕ್ಷಕರ ಬೋಧನೆ ಪರಿಣಾಮಕಾರಿ ಹಾಗೂ ಫಲಪ್ರದವಾಗಲು ಅವರ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ.

## ಶಿಕ್ಷಣಕ್ಕೆ  ಒದಗಿಸಲಾದ ಆಯವ್ಯಯ:

1. 2008-09ನೇ ಸಾಲಿಗೆ ಸಾಮಾನ್ಯ ಶಿಕ್ಷಣಕ್ಕೆ  ಒದಗಿಸಲಾದ ಆಯವ್ಯಯ ನಿಗಧಿ:

ಯೋಜನೆ: ರೂ. 174078.47 ಲಕ್ಷಗಳು
ಯೋಜನೇತರ ರೂ. 653026.86 ಲಕ್ಷಗಳು
ಒಟ್ಟು ರೂ. 827105.33 ಲಕ್ಷಗಳು

(ಲಕ್ಷಗಳಲ್ಲಿ)

| ಕ್ರ.ಸಂ. | ವಿವರಗಳು | ಯೋಜನೆ | ಯೋಜನೇತರ | ಒಟ್ಟು | ಶೇಕಡಾವಾರು |
|---|---|---|---|---|---|
| 1 | ಪ್ರಾಥಮಿಕ ಶಿಕ್ಷಣ | 98638.78 | 367696.47 | 466335.25 | 56.38 |
| 2 | ಪ್ರೌಢ ಶಿಕ್ಷಣ | 45380.62 | 221503.98 | 266884.60 | 32.27 |

2. 2009-10ನೇ ಸಾಲಿಗೆ ಸಾಮಾನ್ಯ ಶಿಕ್ಷಣಕ್ಕೆ  ಒದಗಿಸಲಾದ ಆಯವ್ಯಯ ನಿಗಧಿ:

ಯೋಜನೆ: ರೂ. 180724.75 ಲಕ್ಷಗಳು
ಯೋಜನೇತರ ರೂ. 652339.44 ಲಕ್ಷಗಳು
ಒಟ್ಟು ರೂ. 827105.33 ಲಕ್ಷಗಳು

(ಲಕ್ಷಗಳಲ್ಲಿ)

| ಕ್ರ.ಸಂ. | ವಿವರಗಳು | ಯೋಜನೆ | ಯೋಜನೇತರ | ಒಟ್ಟು | ಶೇಕಡಾವಾರು |
|---|---|---|---|---|---|
| 1 | ಪ್ರಾಥಮಿಕ ಶಿಕ್ಷಣ | 88715.57 | 366979.90 | 455695.47 | 54.70 |
| 2 | ಪ್ರೌಢ ಶಿಕ್ಷಣ | 59562.98 | 223634.79 | 283197.77 | 33.99 |

೩. ೨೦೧೦-೧೧ನೇ ಸಾಲಿಗೆ ಸಾಮಾನ್ಯ ಶಿಕ್ಷಣಕ್ಕೆ ಒದಗಿಸಲಾದ ಆಯವ್ಯಯ ನಿಗಧಿ:

ಯೋಜನೆ: ರೂ. 204850.84 ಲಕ್ಷಗಳು
ಯೋಜನೇತರ ರೂ. 776336.31 ಲಕ್ಷಗಳು
ಒಟ್ಟು ರೂ. 981187.15 ಲಕ್ಷಗಳು

(ಲಕ್ಷಗಳಲ್ಲಿ)

| ಕ್ರ.ಸಂ. | ವಿವರಗಳು | ಯೋಜನೆ | ಯೋಜನೇತರ | ಒಟ್ಟು | ಶೇಕಡಾವಾರು |
|---|---|---|---|---|---|
| 1 | ಪ್ರಾಥಮಿಕ ಶಿಕ್ಷಣ | 90041.24 | 416989.72 | 507030.96 | 51.67 |
| ೨ | ಪ್ರೌಢ ಶಿಕ್ಷಣ | 56570.87 | 252804.44 | 309375.31 | 31.53 |

## 1. ಮಧ್ಯಾಹ್ನ ಉಪಹಾರ ಯೋಜನೆ:

- ೨೦೦೯-೧೦ನೇ ಸಾಲಿನಲ್ಲಿ ಅಕ್ಷರ ದಾಸೋಹ ಬಿಸಿಯೂಟ ಕಾರ್ಯಕ್ರಮದಡಿಯಲ್ಲಿ ಒಟ್ಟು 55104 ಶಾಲೆಗಳು ಒಳಪಟ್ಟಿದ್ದು 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರ ಮತ್ತು ಅನುದಾನಿತ ಶಾಲೆಗಳ ಒಟ್ಟು 65.14 ಲಕ್ಷ ಮಕ್ಕಳು ಫಲಾನುಭವಿಗಳಾಗಿರುತ್ತಾರೆ. ರೂ.413.42ಕೋಟಿ ಅನುದಾನ ಖರ್ಚಾಗಿರುತ್ತದೆ.
- ೨೦೧೦-೧೧ನೇ ಸಾಲಿಗೆ ರೂ.437.85 ಕೋಟಿ ಅನುದಾನ ಒದಗಿಸಲಾಗಿದೆ. ೨೦೦೯-೧೦ನೇ ಸಾಲಿನಲ್ಲಿ 18241 ಅಡುಗೆ ಕೋಣೆಗಳ ನಿರ್ಮಾಣಕ್ಕಾಗಿ ರೂ.110.00 ಕೋಟಿ ಬಿಡುಗಡೆ ಮಾಡಿದ್ದು ಸುಮಾರು ೨೦೦೦ ಅಡುಗೆ ಕೋಣೆಗಳು ಪೂರ್ಣಗೊಂಡಿವೆ.

## ೨. ಉಚಿತ ಶಾಲಾ ಬ್ಯಾಗ್ ಮತ್ತು ನೋಟ್ ಪುಸ್ತಕ:

- ೨೦೦೮-೦೯ನೇ ಮತ್ತು ೨೦೦೯-೨೦೧೦ ಸಾಲಿನಲ್ಲಿ 1 ರಿಂದ 10ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು (19.14 ಲಕ್ಷ ವಿದ್ಯಾರ್ಥಿಗಳು) ವಿತರಿಸಲಾಗಿದೆ ಹಾಗೂ 1 ರಿಂದ 5ನೇ ತರಗತಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಒಂದು ಶಾಲಾ ಬ್ಯಾಗ್‌ನಂತೆ 12.15 ಲಕ್ಷ ಮಕ್ಕಳಿಗೆ ವಿತರಣೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ಒಟ್ಟು ರೂ. ೨೦೫೦.೦೦ ಲಕ್ಷಗಳನ್ನು ವಿನಿಯೋಗಿಸಿದೆ.

- ೨೦೦೯-೨೦೧೦ನೇ ಸಾಲಿನಲ್ಲಿ 1 ರಿಂದ 10ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು (19.೩೦ ಲಕ್ಷ ವಿದ್ಯಾರ್ಥಿಗಳು) ವಿತರಿಸಲಾಗಿದೆ ಹಾಗೂ 1 ರಿಂದ 5ನೇ ತರಗತಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಒಂದು ಶಾಲಾ ಬ್ಯಾಗ್‌ನಂತೆ ರೂ.12.15 ಲಕ್ಷ ಮಕ್ಕಳಿಗೆ ವಿತರಣೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ಒಟ್ಟು ರೂ. ೨೦೦೦.೦೦ ಲಕ್ಷಗಳನ್ನು ವಿನಿಯೋಗಿಸಿದೆ.
- ೨೦೧೦-೧೧ನೇ ಸಾಲಿನಲ್ಲಿ 1 ರಿಂದ 10ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಿಸಲು ಮತ್ತು 1 ರಿಂದ 5ನೇ ತರಗತಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಒಂದು ಶಾಲಾ ಬ್ಯಾಗ್ ನೀಡಲು ಒಟ್ಟು 19.೩೦ ಲಕ್ಷ ಮಕ್ಕಳಿಗೆ ರೂ 1೩.೦೦ ಕೋಟಿಗಳನ್ನು ಒದಗಿಸಲಾಗಿದೆ

## ೩. ಉಚಿತ ಪಠ್ಯಪುಸ್ತಕಗಳು.

2008-09 ನೇ ಸಾಲಿಗಾಗಿ 1 ರಿಂದ 10ನೇ ತರಗತಿಯವರೆಗೆ 10 ಭಾಷೆ ಹಾಗೂ 7 ಮಾಧ್ಯಮಗಳ 317 ಶೀರ್ಷಿಕೆಗಳು ಮುದ್ರಣಗೊಂಡಿರುತ್ತವೆ. ಒಟ್ಟು ವೆಚ್ಚ ರೂ. 56.00 ಕೋಟಿ. ಒಟ್ಟು ಫಲಾನುಭವಿಗಳು 64 ಲಕ್ಷ ವಿದ್ಯಾರ್ಥಿಗಳು.

2009-10 ನೇ ಸಾಲಿಗಾಗಿ 1 ರಿಂದ 10ನೇ ತರಗತಿಯವರೆಗೆ 10 ಭಾಷೆಗಳಲ್ಲಿ 7 ಮಾಧ್ಯಮಗಳ 317 ಶೀರ್ಷಿಕೆಗಳು ಮುದ್ರಣಗೊಂಡಿರುತ್ತವೆ. ಒಟ್ಟು ವೆಚ್ಚ ರೂ. 64.00 ಕೋಟಿ. ಒಟ್ಟು ಫಲಾನುಭವಿಗಳು 75 ಲಕ್ಷ ವಿದ್ಯಾರ್ಥಿಗಳು.

2010-11 ನೇ ಸಾಲಿಗಾಗಿ 1 ರಿಂದ 10ನೇ ತರಗತಿಯವರೆಗೆ 10 ಭಾಷೆಗಳಲ್ಲಿ 7 ಮಾಧ್ಯಮಗಳ 317 ಶೀರ್ಷಿಕೆಗಳು ಮುದ್ರಣಗೊಂಡಿರುತ್ತವೆ.. ಒಟ್ಟು ಅಂದಾಜು ವೆಚ್ಚ ರೂ.60.00 ಕೋಟಿ. ಒಟ್ಟು ಫಲಾನುಭವಿಗಳು 75 ಲಕ್ಷ ವಿದ್ಯಾರ್ಥಿಗಳು.

## 4. ಉಚಿತ ಸಮವಸ್ತ್ರ .

2008-09ನೇ ಸಾಲಿನಲ್ಲಿ 1 ರಿಂದ 10ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಒಂದು ಜೊತೆ ಸಮವಸ್ತ್ರ ನೀಡಲಾಗುತ್ತಿದೆ. ಈ ಕಾರ್ಯಕ್ರಮದಡಿಯಲ್ಲಿ 64.85 ಲಕ್ಷ ಮಕ್ಕಳು ಫಲಾನುಭವಿಗಳಾಗಿದ್ದು ಅದಕ್ಕಾಗಿ ರೂ.65.85ಕೋಟಿ ವೆಚ್ಚ ಭರಿಸಲಾಗಿದೆ.

2009-10ನೇ ಸಾಲಿನಲ್ಲಿ 1 ರಿಂದ 10ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಒಂದು ಜೊತೆ ಸಮವಸ್ತ್ರ ನೀಡಲಾಗುತ್ತಿದೆ. ಈ ಕಾರ್ಯಕ್ರಮದಡಿಯಲ್ಲಿ 62.63 ಲಕ್ಷ ಮಕ್ಕಳು ಫಲಾನುಭವಿಗಳಾಗಿದ್ದು ಅದಕ್ಕಾಗಿ ರೂ71.75 ಕೋಟಿ ವೆಚ್ಚ ಭರಿಸಲಾಗಿದೆ.

2010-11ನೇ ಸಾಲಿನಲ್ಲಿ ವಿದ್ಯಾವಿಕಾಸ ಯೋಜನೆಯಡಿ 1 ರಿಂದ 10ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಒಂದು ಜೊತೆ ಸಮವಸ್ತ್ರ ನೀಡಲು ಒಟ್ಟು 58 ಲಕ್ಷ ಮಕ್ಕಳಿಗೆ 60.00 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

## 5. ಉಚಿತ ಬೈಸಿಕಲ್ ಯೋಜನೆ:

- 2008-09ನೇ ಸಾಲಿನಲ್ಲಿ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಾಲೆಗಳ 8ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ 3.24 ಲಕ್ಷ ವಿದ್ಯಾರ್ಥಿನಿಯರಿಗೆ ಹಾಗೂ 3.41 ಲಕ್ಷ ವಿದ್ಯಾರ್ಥಿಗಳಿಗೆ ಒಟ್ಟು 6,66,222 ಮಕ್ಕಳಿಗೆ ರೂ. 159.69 ಕೋಟಿ ವೆಚ್ಚದಲ್ಲಿ ಉಚಿತ ಬೈಸಿಕಲ್ ವಿತರಿಸಲಾಗಿದೆ. (ಪ್ರತಿ ಬೈಸಿಕಲ್ ಧರ ರೂ.2397.00)
- 2009-10ನೇ ಸಾಲಿನಲ್ಲಿ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಾಲೆಗಳ 8ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ (ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳ ಮಕ್ಕಳನ್ನು ಮತ್ತು ಬಸ್ ಪಾಸ್ ಹಾಗೂ ಹಾಸ್ಟೆಲ್ ಸೌಲಭ್ಯ ಹೊಂದಿರುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ) 2.66 ಲಕ್ಷ ವಿದ್ಯಾರ್ಥಿನಿಯರಿಗೆ ಹಾಗೂ 2.66 ಲಕ್ಷ ವಿದ್ಯಾರ್ಥಿಗಳಿಗೆ ಒಟ್ಟು 5,32,394 ಮಕ್ಕಳಿಗೆ ರೂ. 127.24 ಕೋಟಿ ವೆಚ್ಚದಲ್ಲಿ ಉಚಿತ ಬೈಸಿಕಲ್ ವಿತರಿಸಲಾಗಿದೆ.(ಪ್ರತಿ ಬೈಸಿಕಲ್ ಧರ ರೂ.2390.00)

## 6. ಗ್ರಾಮಾಂತರ ಸರ್ಕಾರಿ ಪ್ರೌಢಶಾಲೆಗಳಿಗೆ ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ ಅಡಿಯಲ್ಲಿ ಕೊಠಡಿಗಳ ನಿರ್ಮಾಣ:

- ಸರ್ಕಾರಿ ಪ್ರೌಢ ಶಾಲೆಗಳಿಗೆ ನಬಾರ್ಡ್ ಆರ್ಥಿಕ ನರೆವಿನೊಂದಿಗೆ ಆರ್.ಐ.ಡಿ.ಎಫ್. – 14 ಯೋಜನೆಯಡಿ 1055 ತರಗತಿ ಕೊಠಡಿ ನಿರ್ಮಾಣ ಮಾಡಲು ರೂ.50.07 ಕೋಟಿಗಳನ್ನು ಒದಗಿಸಲಾಗಿದೆ
- ಸರ್ಕಾರಿ ಪ್ರೌಢ ಶಾಲೆಗಳಿಗೆ ನಬಾರ್ಡ್ ಆರ್ಥಿಕ ನರೆವಿನೊಂದಿಗೆ ಆರ್.ಐ.ಡಿ.ಎಫ್. – 15 ಯೋಜನೆಯಡಿ 202 ತರಗತಿ ಕೊಠಡಿ ನಿರ್ಮಾಣ ಮಾಡಲು ರೂ.10.00 ಕೋಟಿಗಳನ್ನು ಒದಗಿಸಲಾಗಿದೆ.
- ಆರ್.ಐ.ಡಿ.ಎಫ್-16ರಡಿ, 198 ತರಗತಿ ಕೊಠಡಿ ನಿರ್ಮಾಣ ರೂ.10 ಕೋಟಿ ಒದಗಿಸಲಾಗಿದೆ.

## ೭. ಶುಲ್ಕ ಮರುಪಾವತಿ:

- ❖ 2009-10ನೇ ಸಾಲಿನಲ್ಲಿ 6 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ಮತ್ತು ಎಲ್ಲಾ ಹೆಣ್ಣುಮಕ್ಕಳ ಶುಲ್ಕ ಮರುಪಾವತಿಗಾಗಿ ರೂ.486.59 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕ ಮರುಪಾವತಿಗಾಗಿ ರೂ.650.77 ಲಕ್ಷ ವೆಚ್ಚವಾಗಿರುತ್ತದೆ.
- ❖ 2010-11ನೇ ಸಾಲಿನಲ್ಲಿ 6 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ಮತ್ತು ಎಲ್ಲಾ ಹೆಣ್ಣುಮಕ್ಕಳ ಶುಲ್ಕ ಮರುಪಾವತಿಗಾಗಿ ರೂ.486.59 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕ ಮರುಪಾವತಿಗಾಗಿ ರೂ.1221.33 ಲಕ್ಷ ಜಿಲ್ಲಾವಲಯದಡಿ ಒದಗಿಸಲಾಗಿದೆ.

## ೮. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ:

- ❖ ಎಸ್.ಎಸ್.ಎಲ್.ಸಿ.ಪರೀಕ್ಷಾ ಪದ್ಧತಿಯನ್ನು 2006 ರಲ್ಲಿ ಬದಲಾವಣೆ ಮಾಡಿ ಶೇಕಡಾ 60 ರಷ್ಟು ಬಹು ಆಯ್ಕೆ ಪ್ರಶ್ನೆಗಳನ್ನು ಹಾಗೂ ಶೇಕಡಾ 40 ರಷ್ಟು ಸಾಂಪ್ರದಾಯಕ ಪ್ರಶ್ನೆಗಳನ್ನು ಅಳವಡಿಸಲಾಗಿತ್ತು ಅದರೆ ಮಕ್ಕಳಲ್ಲಿ ಗುಣಮಟ್ಟದ ಕಲಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ಮಾಡಿದೆ. ಮಾರ್ಚಿ 2010 ರ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪದ್ಧತಿಯಲ್ಲಿ ಬದಲಾವಣೆ ಮಡಿ ದೀರ್ಘ ಉತ್ತರಗಳಿಗೆ ಮಹತ್ವವನ್ನು ಕೊಡಲಾಯಿತು.
- ❖ ಎಸ್.ಎಸ್.ಎಲ್.ಸಿ, ಐ.ಸಿ.ಎಸ್.ಸಿ/ಸಿ.ಬಿ.ಎಸ್.ಸಿ.(10ನೇ ತರಗತಿ) ಪರೀಕ್ಷೆಯಲ್ಲಿ ಶೇಕಡ 60 ಹಾಗೂ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಎಲ್ಲಾ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕ್ರಮವಾಗಿ 5000/- ಹಾಗೂ 10000/- ರೂ.ಗಳ ಪ್ರೋತ್ಸಾಹ ಧನವನ್ನು ವಿತರಿಸಲಾಗಿದೆ. ರೂ.20.00 ಕೋಟಿಗಳನ್ನು ಒದಗಿಸಲಾಗಿದೆ.

## ೯. ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಎಸ್.ಡಿ.ಪಿ. ಮತ್ತು ಪಂಚಸೌಲಭ್ಯದಡಿ ಮೂಲಭೂತ ಸೌಲಭ್ಯ ಒದಗಿಸಿರುವ ಬಗ್ಗೆ:

- ❖ ಡಾ. ಡಿ.ಎಂ. ನಂಜುಂಡಪ್ಪನವರ ವರದಿ ಪ್ರಕಾರ ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರುವ ಬ್ಲಾಕ್‌ಗಳಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮೂಲಭೂತ ಸೌಲಭ್ಯಗಳಾದ ಅಗತ್ಯ ಪೀಠೋಪಕರಣ, ಶೌಚಾಲಯಗಳ ನಿರ್ಮಾಣ ಮತ್ತು ಕುಡಿಯುವ ನೀರನ್ನು ಒದಗಿಸಲು 2008-09ನೇ ಸಾಲಿನಲ್ಲಿ **ವಿಶೇಷ ಅಭಿವೃದ್ಧಿ ಯೋಜನೆಯಡಿಯ**ಲ್ಲಿ ರೂ. 40.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
- ❖ 2009-10ನೇ ಸಾಲಿನಲ್ಲಿ **ಪಂಚಸೌಲಭ್ಯದಡಿ** ಸರ್ಕಾರಿ ಶಾಲೆಗಳಿಗೆ ರೂ.300.00 ಲಕ್ಷ ಅನುದಾನ ಖರ್ಚು ಮಾಡಲಾಗಿದೆ.
- ❖ ಡಾ. ಡಿ.ಎಂ. ನಂಜುಂಡಪ್ಪನವರ ವರದಿ ಪ್ರಕಾರ ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರುವ ಬ್ಲಾಕ್‌ಗಳಲ್ಲಿನ ಸರ್ಕಾರಿ ಪ್ರೌಢಶಾಲೆಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ರೂ.50.00 ಕೋಟಿ, ಕುಡಿಯುವ ನೀರು ಮತ್ತು ಶೌಚಾಲಯ ನಿರ್ಮಾಣಕ್ಕಾಗಿ ರೂ.1664.74ಲಕ್ಷ, ಅನುದಾನವನ್ನು ಒದಗಿಸಲಾಗಿದೆ.
- ❖ ಡಾ. ಡಿ.ಎಂ. ನಂಜುಂಡಪ್ಪನವರ ವರದಿ ಪ್ರಕಾರ 39 ಹಿಂದುಳಿದ ತಾಲ್ಲೂಕುಗಳಲ್ಲಿ **ಕೆ.ಜಿ.ಬಿ.ವಿ.ವಸತಿ ನಿಲಯ** ತೆರೆಯಲು ರೂ.2915.24 ಲಕ್ಷ ಅನುದಾನವನ್ನು 2009-10ನೇ ಸಾಲಿನಲ್ಲಿ ಒದಗಿಸಲಾಗಿದೆ ಹಾಗೂ 2010-11ನೇ ಸಾಲಿನಲ್ಲಿ ರೂ.3500.00 ಲಕ್ಷಗಳನ್ನು ಒದಗಿಸಲಾಗಿದೆ.
- ❖ 2009-10ನೇ ಸಾಲಿನಲ್ಲಿ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಬಾಲಕಿಯರಿಗಾಗಿ **ಕರ್ನಾಟಕ ಕೆ.ಜಿ.ಬಿ.ವಿ ವಸತಿ ನಿಲಯಗಳನ್ನು** ಪ್ರಾರಂಭಿಸಿದೆ. ಪ್ರತಿ ವಸತಿ ನಿಲಯದ ಕಟ್ಟಡ ಕಾಮಗಾರಿಗಳಿಗಾಗಿ ಘಟಕ್ಕ ವೆಚ್ಚ ರೂ.69.85 ಲಕ್ಷಗಳನ್ನು ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ.

- ಪ್ರತಿ ಕೆ.ಕೆ.ಜಿ.ಬಿ.ವಿ ವಸತಿ ನಿಲಯದ (ನಿರ್ವಹಣೆಗಾಗಿ) ಆವರ್ತಕ ವೆಚ್ಚಕ್ಕಾಗಿ ರೂ.22.43 ಲಕ್ಷಗಳಂತೆ ಒಟ್ಟು ರೂ.875.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
- 2010-11 ನೇ ಸಾಲಿನಲ್ಲಿ ಅತಿ ಹಿಂದುಳಿದ 20 ತಾಲ್ಲೂಕುಗಳಲ್ಲಿ ಕರ್ನಾಟಕ ಕೆ.ಜಿ.ಬಿ.ವಿ ವಸತಿ ನಿಲಯಗಳನ್ನು ಆರಂಭಿಸಲು ರೂ.1400.00 ಲಕ್ಷಗಳನ್ನು ಒದಗಿಸಲಾಗಿದ್ದು, ಕಟ್ಟಡ ಕಾಮಗಾರಿಗಳನ್ನು ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಬೆಂಗಳೂರು ರವರಿಗೆ ವಹಿಸಿ ಎಂ.ಓ.ಯೂ ಮಾಡಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದ್ದೆ.
- 2010-11ನೇ ಸಾಲಿನಲ್ಲಿ ಕುಡಿಯುವ ನೀರು,ಶೌಚಾಲಯ, ಕಾಂಪೌಂಡ್ ಮತ್ತು ಮೂಲಭೂತ ಸೌಲಭ್ಯಗಳನ್ನು ಸರ್ಕಾರಿ ಪ್ರೌಢಶಾಲೆಗಳಲ್ಲಿ ಒದಗಿಸಲು ಪಂಚಸೌಲಭ್ಯದಡಿ ರೂ.65.00 ಕೋಟಿ ನಿಗಧಿಪಡಿಸಲಾಗಿದೆ.
- ಪ್ರೌಢಶಾಲೆಗಳಿಗೆ ಕಟ್ಟಡ ಒದಗಿಸಲು ರೂ.3500.00 ಲಕ್ಷಗಳನ್ನು ಒದಗಿಸಲಾಗಿದೆ.
- ಕಾಂಪೌಂಡ್‌ಗಾಗಿ ರೂ.300.00 ಲಕ್ಷಗಳನ್ನು ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸಲಾಗಿದ್ದು ಪ್ರಥಮ ಮತ್ತು ದ್ವಿತಿಯ ತ್ರೈಮಾಸಿಕ ಅನುದಾನ ರೂ.150.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

## 10. ಶಿಕ್ಷಕರ ವಸತಿ ಗೃಹ ನಿರ್ಮಾಣ:-

- ಗ್ರಾಮಾಂತರ ಪ್ರದೇಶದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ವಸತಿ ಗೃಹ ನಿರ್ಮಾಣಕ್ಕಾಗಿ ಡಾ:ನಂಜುಂಡಪ್ಪ ವರದಿ ಪ್ರಕಾರ ಶೈಕ್ಷಣಿಕವಾಗಿ ಹಿಂದುಳಿದ 31 ತಾಲ್ಲೂಕುಗಳ 79 ಸಮೂಹ ಕೇಂದ್ರಗಳಲ್ಲಿ 632 ಮನೆಗಳನ್ನು ಕಟ್ಟಲು 2007-08ರಲ್ಲಿ ರೂ.19.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ವಸತಿ ನಿರ್ಮಾಣ ಮಾಡುವ ಕಾರ್ಯವನ್ನು ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದವರಿಗೆ ವಹಿಸಲಾಗಿದೆ. 2008-09 ನೇ ಸಾಲಿಗೆ ರೂ.11.00 ಕೋಟಿ ಮತ್ತು 2009-10ನೇ ಸಾಲಿಗೆ ರೂ.10.00 ಕೋಟಿಗಳ ಅನುದಾನ ವೆಚ್ಚ ಮಾಡಲಾಗಿದೆ.2010-11ನೇ ಸಾಲಿಗೆ ರೂ.17.00 ಕೋಟಿ ಅನುದಾನ ನಿಗಧಿಪಡಿಸಲಾಗಿದೆ.
- ಪ್ರತಿ ಶಿಕ್ಷಕ ವಸತಿ ಸಂಕೀರ್ಣದಲ್ಲಿ 8 ಮನೆಗಳುಇರುತ್ತವೆ, ಇದು ಒಂದು ಘಟಕ2009-10 ನೇ ಸಾಲಿನಲ್ಲಿ ಒಂದು ಘಟಕ ವೆಚ್ಚ ರೂ.33.42 ಲಕ್ಷಗಳು, ಒಂದು ವಸತಿ ನಿಲಯದ ವೆಚ್ಚ ರೂ.4,17,8.35.00.
- 2010-11ನೇ ಸಾಲಿನಲ್ಲಿ ಶಿಕ್ಷಕರ ವಸತಿ ಸಂಕೀರ್ಣದ ಘಟಕ ವೆಚ್ಚ ರೂ.44.80 ಲಕ್ಷ ಒಂದು ವಸತಿ ನಿಲಯದ ವೆಚ್ಚ ರೂ.5.60 ಲಕ್ಷ.

## 11. ನಗರ ಪ್ರದೇಶ ಹಾಗೂ ಗ್ರಾಮಾಂತರ ಪ್ರದೇಶದ ಕಟ್ಟಡರಹಿತ ಶಾಲೆಗಳಿಗೆ ಕಟ್ಟಡ ಒದಗಿಸಿರುವ ಬಗ್ಗೆ:

- 2008-09ನೇ ಸಾಲಿಗೆ ಯೋಜನೇತರದಡಿಯಲ್ಲಿ ರಾಜ್ಯದ ನಗರ ಪ್ರದೇಶದ ಸರ್ಕಾರಿ ಪ್ರೌಢಶಾಲೆಗಳ 153 ಶಾಲಾ ಕೊಠಡಿಗಳನ್ನು ನಿರ್ಮಿಸಲು ರೂ. 763.79 ಲಕ್ಷ ಹಾಗೂ 57 ಶಾಲಾ ಕೊಠಡಿಗಳನ್ನು ನಿರ್ಮಿಸಲು ರೂ. 260.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದೆ.
- 2009-10ನೇ ಸಾಲಿನಲ್ಲಿ ಯೋಜನೇತರದಡಿಯಲ್ಲಿ ರಾಜ್ಯದ ನಗರ ಪ್ರದೇಶದ ಸರ್ಕಾರಿ ಪ್ರೌಢಶಾಲೆಗಳ 149 ಶಾಲಾ ಕೊಠಡಿಗಳನ್ನು ನಿರ್ಮಿಸಲು ರೂ.793.92 ಲಕ್ಷ ಒದಗಿಸಲಾಗಿದೆ.
- 2009-10ನೇ ಸಾಲಿನಲ್ಲಿ ಪ್ರೌಢಶಾಲಾಭಿವೃದ್ಧಿ ಯೋಜನೆಯಡಿಯಲ್ಲಿ ಹೊಸ ಪ್ರೌಢಶಾಲಾ ಕಟ್ಟಡ ನಿರ್ಮಾಣಕ್ಕಾಗಿ 40 ಕೊಠಡಿಗಳಿಗೆ ರೂ.200.00 ಲಕ್ಷ ಅನುದಾನ ಒದಗಿಸಲಾಗಿದೆ.
- 2008-09 ನೇ ಸಾಲಿನಲ್ಲಿ ಯೋಜನೇತರದಡಿಯಲ್ಲಿ ಪ್ರೌಢಶಾಲಾ ಕಟ್ಟಡ ದುರಸ್ತಿಗಾಗಿ ರೂ. 1124.86 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.
- 2009-10ನೇ ಸಾಲಿನಲ್ಲಿ ಯೋಜನೇತರದಡಿಯಲ್ಲಿ ಪ್ರೌಢಶಾಲಾ ಕಟ್ಟಡ ದುರಸ್ತಿ ಹಾಗೂ ಕೊಠಡಿಗಳ ನಿರ್ಮಾಣಕ್ಕಾಗಿ ರೂ.1169.85 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

- 2010-11ನೇ ಸಾಲಿನಲ್ಲಿ ನಗರ ಪ್ರದೇಶದ ಕೊಠಡಿಗಳ ನಿರ್ಮಾಣಕ್ಕಾಗಿ ಯೋಜನೇತರದಡಿಯಲ್ಲಿ ರೂ.794.00 ಲಕ್ಷ ಹಾಗೂ ಕೊಠಡಿಗಳ ದುರಸ್ತಿಗಾಗಿ ರೂ.1170.00 ಲಕ್ಷಗಳ ಅನುದಾನ ಒದಗಿಸಲಾಗಿದೆ.
- 2010-11ನೇ ಸಾಲಿನಲ್ಲಿ ಪ್ರೌಢಶಾಲಾ ಕೊಠಡಿ ನಿರ್ಮಾಣ, ಉಪನಿರ್ದೇಶಕರು ಹಾಗೂ ಬಿ.ಇ.ಓ.ಕಛೇರಿಗಳ ನಿರ್ಮಾಣ/ದುರಸ್ತಿ ಹಾಗೂ ಭೂಸ್ವಾಧೀನಕ್ಕಾಗಿ ರೂ.6.00 ಕೋಟಿಗಳ ಅನುದಾನ ಒದಗಿಸಲಾಗಿದೆ.

## 12. ಮಾರ್ಚ್-2010ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಗಣಕ ಯಂತ್ರ ನೀಡುವ ಬಗ್ಗೆ.

- 2010-11ನೇ ಸಾಲಿನಲ್ಲಿ ಮಾರ್ಚ್-2010ರ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ 34 ಜಿಲ್ಲೆಗಳಲ್ಲಿನ (ಪ್ರತಿ ಜಿಲ್ಲೆಗೆ 03 ವಿದ್ಯಾರ್ಥಿಗಳಂತೆ) ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕವಾಗಿ ಗಣಕ ಯಂತ್ರವನ್ನು ವಿತರಿಸಲು ಒಟ್ಟು 108 ವಿದ್ಯಾರ್ಥಿಗಳಿಗೆ ರೂ 38.00 ಲಕ್ಷಗಳನ್ನು ವಿನಿಯೋಗಿಸಲಾಗಿದೆ.

## 13. ಸರ್ಕಾರಿ ಪ್ರೌಢಶಾಲೆಗಳಲ್ಲಿ ಐ.ಸಿ.ಟಿ. ಯೋಜನೆಯಡಿ ಕಂಪ್ಯೂಟರ್ ಶಿಕ್ಷಣ ಮತ್ತು ಕಂಪ್ಯೂಟರ್ ಆಧಾರಿತ ಶಿಕ್ಷಣ.

- ಮಾಹಿತಿ ಸಿಂಧು ಯೋಜನೆ: **ಐ.ಸಿ.ಟಿ.-1: ಐ.ಸಿ.ಟಿ-2: ಎಜುಸ್ಯಾಟ್ ಕಾರ್ಯಕ್ರಮ**

ಕೇಂದ್ರ ಮತ್ತು ರಾಜ್ಯ ಸರ್ಕಾರದ ಜಂಟಿ ಸಹಯೋಗದೊಂದಿಗೆ ನಡೆಯುತ್ತಿರುವ ಕಾರ್ಯಕ್ರಮವಾಗಿರುತ್ತದೆ. ಈ ಯೋಜನೆಯಡಿ 6427 ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗುತ್ತಿದೆ

ಇಸ್ರೋ ನೆರವಿನಿಂದ ಶಾಲೆಗಳಲ್ಲಿ ಮಕ್ಕಳಲ್ಲಿ ಕಲಿಕೆಯನ್ನು ಪರಿಣಾಮಕಾರಿಯಾಗಿಸುಲು ಸ್ವೀಕೃತಿ ಕೇಂದ್ರಗಳನ್ನು ತೆರೆಯಲಾಗಿದೆ. ಒಟ್ಟು 458 ಚಿತ್ರಗಳನ್ನು ಪ್ರಸಾರಕ್ಕಾಗಿ ತಯಾರಿಸಲಾಗಿದೆ. ರಾಜ್ಯದ 202 ಬಿ.ಆರ್.ಸಿಗಳಲ್ಲಿ , ಎಲ್ಲಾ ಡಯಟ್‌ಗಳಲ್ಲಿ ಮತ್ತು 2560 ಸ.ಹಿ.ಪ್ರಾ.ಶಾಲೆಗಳಲ್ಲಿ ಸ್ವೀಕೃತಿ ಕೇಂದ್ರಗಳನ್ನು ಅಳವಡಿಸಲಾಗಿದೆ.

- 2010-11ನೇ ಸಾಲಿನಲ್ಲಿ ಐ.ಸಿ.ಟಿ ಫೇಸ್ 3 ರಡಿ 4396 ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ನೀಡಲು ಕಾರ್ಯಕ್ರಮ ಹಮ್ಮಿ ಕೊಂಡಿದ್ದು ಅನುಷ್ಠಾನ ಹಂತದಲ್ಲಿದೆ.

★★★★★★★★★★★★★★★★★★

## ಕರ್ನಾಟಕ ಸರ್ಕಾರದ

## ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ಬೆಂಗಳೂರು-1



# ಶಿಕ್ಷಣ ಇಲಾಖೆಯಲ್ಲಿನ ಯೋಜನಾ ಕಾರ್ಯಕ್ರಮಗಳ ಪ್ರಗತಿಯ ಪಕ್ಷಿನೋಟ

2010-11

## ಪ್ರಾಥಮಿಕ ಶಿಕ್ಷಣದ ಉದ್ದೇಶ ಮತ್ತು ಗುರಿಗಳು

- 6–14 ವಯೋಮಾನದ ರಾಜ್ಯದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡುವ ಗುರಿ ಹೊಂದಿದೆ.
- ಪ್ರಾಥಮಿಕ ಶಿಕ್ಷಣದ ಜನಾಂದೋಲನವಾಗುವಂತೆ ಸಮುದಾಯವನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು.
- ಪ್ರತಿ ಮಗುವು ನಿಗಧಿಪಡಿಸಿದ ಕನಿಷ್ಠ ಕಲಿಕಾ ಮಟ್ಟವನ್ನು ಸಮರ್ಪಕವಾಗಿ ಹೊಂದುವುದು.
- ಗುಣಾತ್ಮಕ ಬದಲಾವಣೆಗಳನ್ನು ತರುವುದರ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ಸುಧಾರಣೆಯನ್ನು ತರುವುದು.
- ಲಿಂಗತಾರತಮ್ಯ ಮತ್ತು ಸಾಮಾಜಿಕ ಅಸಮತೋಲನವನ್ನು ನಿವಾರಿಸುವ ನಿಟ್ಟಿನಲ್ಲಿ ಸಾಧನೆ ಹೊಂದುವುದು.

### ಪ್ರೌಢಶಿಕ್ಷಣದ ಉದ್ದೇಶ:

- ಪ್ರೌಢ ಶಿಕ್ಷಣದಲ್ಲಿ ಗುಣಾತ್ಮಕ ಶಿಕ್ಷಣವನ್ನು ನೀಡಿ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದತ್ತ ಅರ್ಹತೆ ಹೊಂದುವಂತೆ ಮಾಡುವುದು.
- ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಕಲ್ಪಿಸಿ ವೃತ್ತಿ ಪರತೆ ಮತ್ತು ತಾಂತ್ರಿಕ ಶಿಕ್ಷಣವನ್ನು ಪಡೆಯಲು ಸಿದ್ಧಗೊಳಿಸುವುದು.

### ಸಾಧನೆಗಳು:

- ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಉತ್ತಮಗೊಂಡಿದೆ.
- ಮಕ್ಕಳು ತರಗತಿ ಒಳಗೆ ಮತ್ತು ಹೊರಗೆ ಲವಲವಿಕೆಯಿಂದ ಎಲ್ಲಾ ಶೈಕ್ಷಣಿಕ ಚಟುವಟಿಕೆಯಲ್ಲಿ ಭಾಗವಹಿಸುತ್ತಿರುವರು.
- ಶಾಲಾ ಹಂತದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮಾನತೆ ಹೊಂದಲು ಗಣನೀಯ ಸಾಧನೆ ಹೊಂದಿದೆ.
- ವಿವಿಧ ಪ್ರೋತ್ಸಾಹದಾಯಕ ಯೋಜನೆಯಿಂದ ಮಕ್ಕಳಲ್ಲಿ ಪರಸ್ಪರ ಸೌಹಾರ್ದತೆ ಹಾಗೂ ನಿರೀಕ್ಷಿತ ಗುಣಮಟ್ಟ ಹೆಚ್ಚಾಗಿದೆ.
- ಸುವರ್ಣ ಆರೋಗ್ಯ ಯೋಜನೆಯಡಿಯಲ್ಲಿ 91.76 ಲಕ್ಷ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಕೈಗೊಂಡಿದ್ದು ತೀವ್ರ ಸ್ವರೂಪ ಕಾಯಿಲೆವುಳ್ಳ ಮಕ್ಕಳನ್ನು ಉನ್ನತ ಚಿಕಿತ್ಸೆಗೆ ಒಳಪಡಿಸಿದೆ. ಶಾಲಾ ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದೆ.

- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮೂಲಭೂತ ಸೌಲಭ್ಯಗಳಾದ ಅಗತ್ಯ ಶಾಲಾ ಕಟ್ಟಡ ಭೋಧನ ಕೊಠಡಿಗಳು,ಪೀಠೋಪಕರಣ, ಶೌಚಾಲಯ, ಮತ್ತು ಕುಡಿಯುವ ನೀರು ಒದಗಿಸಲಾಗಿದೆ.
- ಶಿಕ್ಷಕರ ಬೋಧನೆ ಪರಿಣಾಮಕಾರಿ ಹಾಗೂ ಫಲಪ್ರದವಾಗಲು ಅವರ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ.

## ಶಿಕ್ಷಣಕ್ಕೆ ಒದಗಿಸಲಾದ ಆಯವ್ಯಯ:

2010-11ನೇ ಸಾಲಿಗೆ ಸಾಮಾನ್ಯ ಶಿಕ್ಷಣಕ್ಕೆ ಒದಗಿಸಲಾದ ಆಯವ್ಯಯ ನಿಗಧಿ:

ಯೋಜನೆ: ರೂ. 204850.84 ಲಕ್ಷಗಳು
ಯೋಜನೇತರ ರೂ. 776336.31 ಲಕ್ಷಗಳು
ಒಟ್ಟು ರೂ. 981187.15 ಲಕ್ಷಗಳು

(ಲಕ್ಷಗಳಲ್ಲಿ)

| ಕ್ರ.ಸಂ. | ವಿವರಗಳು | ಯೋಜನೆ | ಯೋಜನೇತರ | ಒಟ್ಟು | ಶೇಕಡಾವಾರು |
|---|---|---|---|---|---|
| 1 | ಪ್ರಾಥಮಿಕ ಶಿಕ್ಷಣ | 90041.24 | 416989.72 | 507030.96 | 51.67 |
| 2 | ಪ್ರೌಢ ಶಿಕ್ಷಣ | 56570.87 | 252804.44 | 309375.31 | 31.53 |

## ಮಧ್ಯಾಹ್ನ ಉಪಹಾರ ಯೋಜನೆ:

- ❖ 2010-11ನೇ ಸಾಲಿಗೆ ರೂ.437.85 ಕೋಟಿ ಅನುದಾನ ಒದಗಿಸಲಾಗಿದೆ. 2009-10ನೇ ಸಾಲಿನಲ್ಲಿ 18241 ಅಡುಗೆ ಕೋಣೆಗಳ ನಿರ್ಮಾಣಕ್ಕಾಗಿ ರೂ.110.00 ಕೋಟಿ ಬಿಡುಗಡೆ ಮಾಡಿದ್ದು ಸುಮಾರು 2000 ಅಡುಗೆ ಕೋಣೆಗಳು ಪೂರ್ಣಗೊಂಡಿವೆ.

## ಉಚಿತ ಶಾಲಾ ಬ್ಯಾಗ್ ಮತ್ತು ನೋಟ್ ಪುಸ್ತಕ:

- ❖ 2010-11ನೇ ಸಾಲಿನಲ್ಲಿ 1 ರಿಂದ 10ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಎಲ್ಲಾ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಿಸಲು ಮತ್ತು 1 ರಿಂದ 5ನೇ ತರಗತಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ವಿದ್ಯಾರ್ಥಿಗಳಿಗೆ ಒಂದು ಶಾಲಾ ಬ್ಯಾಗ್ ನೀಡಲು ಒಟ್ಟು 19.30 ಲಕ್ಷ ಮಕ್ಕಳಿಗೆ ರೂ 13.00 ಕೋಟಿಗಳನ್ನು ಒದಗಿಸಲಾಗಿದೆ

## ಉಚಿತ ಪಠ್ಯಪುಸ್ತಕಗಳು.

- ❖ 2010-11 ನೇ ಸಾಲಿಗಾಗಿ 1 ರಿಂದ 10ನೇ ತರಗತಿಯವರೆಗೆ 10 ಭಾಷೆಗಳಲ್ಲಿ 7 ಮಾಧ್ಯಮಗಳ 317 ಶೀರ್ಷಿಕೆಗಳು ಮುದ್ರಣಗೊಂಡಿರುತ್ತವೆ.. ಒಟ್ಟು ಅಂದಾಜು ವೆಚ್ಚ ರೂ.60.00 ಕೋಟಿ. ಒಟ್ಟು ಫಲಾನುಭವಿಗಳು 75 ಲಕ್ಷ ವಿದ್ಯಾರ್ಥಿಗಳು.

## ಉಚಿತ ಸಮವಸ್ತ್ರ .

❖ 2010-11ನೇ ಸಾಲಿನಲ್ಲಿ ವಿದ್ಯಾವಿಕಾಸ ಯೋಜನೆಯಡಿ 1 ರಿಂದ 10ನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಒಂದು ಜೊತೆ ಸಮವಸ್ತ್ರ ನೀಡಲು ಒಟ್ಟು 58 ಲಕ್ಷ ಮಕ್ಕಳಿಗೆ 60.00 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

## ಉಚಿತ ಬೈಸಿಕಲ್ ಯೋಜನೆ:

❖ 2010-11ನೇ ಸಾಲಿನಲ್ಲಿ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಶಾಲೆಗಳ 8ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ (ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಶಾಲೆಗಳ ಮಕ್ಕಳನ್ನು ಮತ್ತು ಬಸ್ ಪಾಸ್ ಹಾಗೂ ಹಾಸ್ಟೆಲ್ ಸೌಲಭ್ಯ ಹೊಂದಿರುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ) 2.80 ಲಕ್ಷ ವಿದ್ಯಾರ್ಥಿನಿಯರಿಗೆ ಹಾಗೂ 2.88 ಲಕ್ಷ ವಿದ್ಯಾರ್ಥಿಗಳಿಗೆ ಒಟ್ಟು 5.68 ಲಕ್ಷ ಮಕ್ಕಳಿಗೆ ರೂ. 148 ಕೋಟಿ ಅಂದಾಜು ವೆಚ್ಚದಲ್ಲಿ ಉಚಿತ ಬೈಸಿಕಲ್ ವಿತರಿಸಲು ಉದ್ದೇಶಿಸಲಾಗಿದೆ.

## ಗ್ರಾಮಾಂತರ ಸರ್ಕಾರಿ ಪ್ರೌಢಶಾಲೆಗಳಿಗೆ ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ ಅಡಿಯಲ್ಲಿ ಕೊಠಡಿಗಳ ನಿರ್ಮಾಣ:

❖ ಸರ್ಕಾರಿ ಪ್ರೌಢ ಶಾಲೆಗಳಿಗೆ ನಬಾರ್ಡ್ ಆರ್ಥಿಕ ನರೆವಿನೊಂದಿಗೆ ಆರ್.ಐ.ಡಿ.ಎಫ್. – 15 ಯೋಜನೆಯಡಿ 202 ತರಗತಿ ಕೊಠಡಿ ನಿರ್ಮಾಣ ಮಾಡಲು ರೂ.10.00 ಕೋಟಿಗಳನ್ನು ಒದಗಿಸಲಾಗಿದೆ.

❖ ಆರ್.ಐ.ಡಿ.ಎಫ್-16ರಡಿ, 198 ತರಗತಿ ಕೊಠಡಿ ನಿರ್ಮಾಣ ರೂ.10 ಕೋಟಿ ಒದಗಿಸಲಾಗಿದೆ.

## ಶುಲ್ಕ ಮರುಪಾವತಿ:

❖ 2010-11ನೇ ಸಾಲಿನಲ್ಲಿ 6 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ಮತ್ತು ಎಲ್ಲಾ ಹೆಣ್ಣುಮಕ್ಕಳ ಶುಲ್ಕ ಮರುಪಾವತಿಗಾಗಿ ರೂ.486.59 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕ ಮರುಪಾವತಿಗಾಗಿ ರೂ.1221.33 ಲಕ್ಷ ಜಿಲ್ಲಾವಲಯದಡಿ ಒದಗಿಸಲಾಗಿದೆ.

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ:

❖ ಎಸ್.ಎಸ್.ಎಲ್.ಸಿ.ಪರೀಕ್ಷಾ ಪದ್ಧತಿಯನ್ನು 2006 ರಲ್ಲಿ ಬದಲಾವಣೆ ಮಾಡಿ ಶೇಕಡಾ 60 ರಷ್ಟು ಬಹು ಆಯ್ಕೆ ಪ್ರಶ್ನೆಗಳನ್ನು ಹಾಗೂ ಶೇಕಡಾ 40 ರಷ್ಟು ಸಾಂಪ್ರದಾಯಕ ಪ್ರಶ್ನೆಗಳನ್ನು ಅಳವಡಿಸಲಾಗಿತ್ತು ಅದರೆ ಮಕ್ಕಳಲ್ಲಿ ಗುಣಮಟ್ಟದ ಕಲಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ಮಾಡಿದೆ. ಮಾರ್ಚಿ 2010 ರ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪದ್ಧತಿಯಲ್ಲಿ ಬದಲಾವಣೆ ಮಡಿ ದೀರ್ಘ ಉತ್ತರಗಳಿಗೆ ಮಹತ್ವವನ್ನು ಕೊಡಲಾಯಿತು.

❖ ಎಸ್.ಎಸ್.ಎಲ್.ಸಿ, ಐ.ಸಿ.ಎಸ್.ಸಿ/ಸಿ.ಬಿ.ಎಸ್.ಸಿ.(10ನೇ ತರಗತಿ) ಪರೀಕ್ಷೆಯಲ್ಲಿ ಶೇಕಡ 60 ಹಾಗೂ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಎಲ್ಲಾ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕ್ರಮವಾಗಿ 5000/- ಹಾಗೂ 10000/- ರೂ.ಗಳ ಪ್ರೋತ್ಸಾಹ ಧನವನ್ನು ವಿತರಿಸಲಾಗಿದೆ. ರೂ.20.00 ಕೋಟಿಗಳನ್ನು ಒದಗಿಸಲಾಗಿದೆ.

## ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಎಸ್.ಡಿ.ಪಿ. ಮತ್ತು ಪಂಚಸೌಲಭ್ಯದಡಿ ಮೂಲಭೂತ ಸೌಲಭ್ಯ ಒದಗಿಸಿರುವ ಬಗ್ಗೆ:

❖ 2010-11 ನೇ ಸಾಲಿನಲ್ಲಿ ಅತಿ ಹಿಂದುಳಿದ 20 ತಾಲ್ಲೂಕುಗಳಲ್ಲಿ ಕರ್ನಾಟಕ ಕೆ.ಜಿ.ಬಿ.ವಿ ವಸತಿ ನಿಲಯಗಳನ್ನು

ಆರಂಭಿಸಲು ರೂ.1400.00 ಲಕ್ಷಗಳನ್ನು ಒದಗಿಸಲಾಗಿದ್ದು, ಕಟ್ಟಡ ಕಾಮಗಾರಿಗಳನ್ನು ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಬೆಂಗಳೂರು ರವರಿಗೆ ವಹಿಸಿ ಎಂ.ಓ.ಯೂ ಮಾಡಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದ್ದೆ.

- 2010-11ನೇ ಸಾಲಿನಲ್ಲಿ ಕುಡಿಯುವ ನೀರು,ಶೌಚಾಲಯ, ಕಾಂಪೌಂಡ್ ಮತ್ತು ಮೂಲಭೂತ ಸೌಲಭ್ಯಗಳನ್ನು ಸರ್ಕಾರಿ ಪ್ರೌಢಶಾಲೆಗಳಲ್ಲಿ ಒದಗಿಸಲು ಪಂಚಸೌಲಭ್ಯದಡಿ ರೂ.65.00 ಕೋಟಿ ನಿಗಧಿಪಡಿಸಲಾಗಿದೆ.
- ಪ್ರೌಢಶಾಲೆಗಳಿಗೆ ಕಟ್ಟಡ ಒದಗಿಸಲು ರೂ.3500.00 ಲಕ್ಷಗಳನ್ನು ಒದಗಿಸಲಾಗಿದೆ.
- ಕಾಂಪೌಂಡ್‌ಗಾಗಿ ರೂ.300.00 ಲಕ್ಷಗಳನ್ನು ವಿಶೇಷ ಅಭಿವೃದ್ಧಿ ಯೋಜನೆಯಡಿ ಒದಗಿಸಲಾಗಿದ್ದು ಪ್ರಥಮ ಮತ್ತು ದ್ವಿತಿಯ ತ್ರೈಮಾಸಿಕ ಅನುದಾನ ರೂ.150.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

## ಶಿಕ್ಷಕರ ವಸತಿ ಗೃಹ ನಿರ್ಮಾಣ:-

- 2010-11ನೇ ಸಾಲಿನಲ್ಲಿ ಶಿಕ್ಷಕರ ವಸತಿ ಸಂಕಿರ್ಣದ ಘಟಕ ವೆಚ್ಚ ರೂ.44.80 ಲಕ್ಷ ಒಂದು ವಸತಿ ನಿಲಯದ ವೆಚ್ಚ ರೂ.5.60 ಲಕ್ಷ.

## ನಗರ ಪ್ರದೇಶ ಹಾಗೂ ಗ್ರಾಮಾಂತರ ಪ್ರದೇಶದ ಕಟ್ಟಡರಹಿತ ಶಾಲೆಗಳಿಗೆ ಕಟ್ಟಡ ಒದಗಿಸಿರುವ ಬಗ್ಗೆ:

- 2010-11ನೇ ಸಾಲಿನಲ್ಲಿ ನಗರ ಪ್ರದೇಶದ ಕೊಠಡಿಗಳ ನಿರ್ಮಾಣಕ್ಕಾಗಿ ಯೋಜನೇತರದಡಿಯಲ್ಲಿ ರೂ.794.00 ಲಕ್ಷ ಹಾಗೂ ಕೊಠಡಿಗಳ ದುರಸ್ತಿಗಾಗಿ ರೂ.1170.00 ಲಕ್ಷಗಳ ಅನುದಾನ ಒದಗಿಸಲಾಗಿದೆ.
- 2010-11ನೇ ಸಾಲಿನಲ್ಲಿ ಪ್ರೌಢಶಾಲಾ ಕೊಠಡಿ ನಿರ್ಮಾಣ, ಉಪನಿರ್ದೇಶಕರು ಹಾಗೂ ಬಿ.ಇ.ಓ.ಕಛೇರಿಗಳ ನಿರ್ಮಾಣ/ದುರಸ್ತಿ ಹಾಗೂ ಭೂಸ್ವಾಧೀನಕ್ಕಾಗಿ ರೂ.6.00 ಕೋಟಿಗಳ ಅನುದಾನ ಒದಗಿಸಲಾಗಿದೆ.

## ಮಾರ್ಚ್-2010ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಗಣಕ ಯಂತ್ರ ನೀಡುವ ಬಗ್ಗೆ.

- 2010-11ನೇ ಸಾಲಿನಲ್ಲಿ ಮಾರ್ಚ್-2010ರ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ 34 ಜಿಲ್ಲೆಗಳಲ್ಲಿನ (ಪ್ರತಿ ಜಿಲ್ಲೆಗೆ 03 ವಿದ್ಯಾರ್ಥಿಗಳಂತೆ) ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕವಾಗಿ ಗಣಕ ಯಂತ್ರವನ್ನು ವಿತರಿಸಲು ಒಟ್ಟು 108 ವಿದ್ಯಾರ್ಥಿಗಳಿಗೆ ರೂ 38.00 ಲಕ್ಷಗಳನ್ನು ವಿನಿಯೋಗಿಸಲಾಗಿದೆ.

## 13. ಸರ್ಕಾರಿ ಪ್ರೌಢಶಾಲೆಗಳಲ್ಲಿ ಐ.ಸಿ.ಟಿ. ಯೋಜನೆಯಡಿ ಕಂಪ್ಯೂಟರ್ ಶಿಕ್ಷಣ ಮತ್ತು ಕಂಪ್ಯೂಟರ್ ಆಧಾರಿತ ಶಿಕ್ಷಣ.

- 2010-11ನೇ ಸಾಲಿನಲ್ಲಿ ಐ.ಸಿ.ಟಿ ಫೇಸ್ 3 ರಡಿ 4396 ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ನೀಡಲು ಕಾರ್ಯಕ್ರಮ ಹಮ್ಮಿ ಕೊಂಡಿದ್ದು ಅನುಷ್ಠಾನ ಹಂತದಲ್ಲಿದೆ.

★★★★★★★★★★★★★★★★★★★★★★

c:\users\planning\desktop\mayura\sadhana samavesha\sadhana samavesha 2010-11.doc